ಗಳಲ್ಲಿ ಸುತ್ತಾಡುತ್ತಿದ್ದಾಗ ತಿಥಿ, ನಕ್ಷತ್ರಗಳು ತಿಳಿಯುತ್ತಿರಲಿಲ್ಲ. ಆದರೆ ವರ್ಷದ ಒಂದು ದಿನವನ್ನು ಗಮನದಲ್ಲಿಡುತ್ತಿದ್ದೆ – ಶಿವರಾತ್ರಿಯ ನಂತರದ ದ್ವಿತೀಯೆಯ ದಿನವನ್ನು. ಅಂದು ಉಪವಾಸ ಮಾಡುತ್ತಿದ್ದೆ. ಸರಿ, ದಿನ, ತಿಂಗಳು, ವರ್ಷ ಎಲ್ಲಿಂದ ಬರುತ್ತಿದ್ದವೋ, ಎಲ್ಲಿಗೆ ಹೋಗುತ್ತಿದ್ದವೋ!''

ಆಗಂತುಕನೊಬ್ಬ (ಭಕ್ತ?) ತಮ್ಮ ಕೈಗಳನ್ನು ಮೇಲಕ್ಕೆತ್ತಿ , ತಲೆಗೆ ಮುಟ್ಟಿಸಿ ಬಾಬಾಗೆ ಪ್ರಣಾಮ ಮಾಡಿದರು. ಬಾಬಾ ಅವನಿಗೆ ಚೆನ್ನಾಗಿ ಬೈಯುತ್ತ, ''ಪ್ರಣಾಮವಲ್ಲ ಕೊಡಲಿಯೇಟು ಎನ್ನುವ ಹಾಗಿದೆ! ಸಾಧು–ಸನ್ಯಾಸಿಗಳಿಗೆ ಪ್ರಣಾಮ ಮಾಡಲೂ ತಿಳಿಯದೆ? ಎಷ್ಟು ರೀತಿಯ ಪ್ರಣಾಮಗಳಿವೆ ಗೊತ್ತೆ? **'ಜಾನುಭ್ಯಾಂ ಚ ತಥಾ ಪದ್ಭ್ಯಾಂ ಉರಸಾ ಶಿರಸಾ ಧಿಯಾ ।'** ನಿಂತುಕೊಂಡು ಪ್ರಣಾಮ ಮಾಡುವುದು ಸ್ವೀಕಾರಾರ್ಹವಲ್ಲ. ಎಷ್ಟು ಜನರಿಗೆ ಕಲಿಸಿಕೊಡುವುದು? ಪ್ರಣಾಮ ಮಾಡುವುದರಲ್ಲಿ ಅನೇಕ ನಿಯಮಗಳಿವೆ. ಮಲಗಿರುವಾಗ, ನಡೆದಾಡುತ್ತಿರುವಾಗ, ಎಣ್ಣೆ ಹಚ್ಚಿಕೊಂಡಿರುವಾಗ, ಅನ್ಯಮನಸ್ಕರಾಗಿರುವಾಗ ಪ್ರಣಾಮ ಮಾಡಬಾರದು. ಈಗಿನ ಕಾಲದಲ್ಲಿ ಕೆಲವರು ಕೊಡಲಿ ಹಿಡಿದಂತೆ ಪ್ರಣಾಮ ಮಾಡುತ್ತಾರೆ, ಇನ್ನು ಕೆಲವರಂತೂ ಭಕ್ತಿಯ ಆವೇಶದಲ್ಲಿ ಯಾವಾಗೆಂದರೆ ಆಗ, ಎಲ್ಲೆಂದರಲ್ಲಿ ನಮಸ್ಕಾರ ಮಾಡುತ್ತಾರೆ! ಯಾರಿಗೂ ಅದರ ನಿಯಮಗಳು ಗೊತ್ತಿಲ್ಲ. ಒಮ್ಮೆ ನಾನು ಬೇಲೂರು ಮಠದಲ್ಲಿ ಮಲಗಿದ್ದೆ; ವೇಳೆ ೨ ಗಂಟೆಯಾಗಿತ್ತು . ಹೇಳದೆ ಕೇಳದೆ ಒಬ್ಬ ಬಂದು ನನ್ನ ಕಾಲುಮುಟ್ಟಿ ನಮಸ್ಕರಿಸಿದ. ನಾನು ಬೆಚ್ಚಿ ಎದ್ದುಕುಳಿತೆ. ಅವನಿಗೆ, 'ನೀವು ಜನರಿಗೆ ಕಲಿಸುತ್ತೀರಿ. ಆದರೆ ಮಲಗಿದವರಿಗೆ ಪ್ರಣಾಮ ಮಾಡಬಾರದೆಂದೂ ನಿಮಗೆ ತಿಳಿದಿಲ್ಲವೆ?' ಎಂದೆ. ನಂತರ ಎದ್ದು ಕುಳಿತು, 'ಸರಿ, ಈ ಬಾರಿ ಒಂದು ಸಲ ಚೆನ್ನಾಗಿ ಮಾಡು' ಎಂದೆ.''

* * *

ಎಡ್ವಾನಿ ಗ್ರಾಮದ ಮುಸಲ್ಮಾನ ಭಕ್ತನೊಬ್ಬ ಪತ್ರ ಬರೆದಿದ್ದಾನೆ. ಅವನ ಸೊಸೆ ಮೃತಳಾಗಿದ್ದಾಳೆ, ಅವನು ಬಹಳ ದುಃಖದಿಂದಿದ್ದಾನೆ. ಯಾರನ್ನಾದರೂ ಅಲ್ಲಿಗೆ ಕಳುಹಿಸಿದರೆ ತನಗೆ ಶಾಂತಿ ಸಿಗುವುದು... ಇತ್ಯಾದಿ. ಪತ್ರವನ್ನು ಕೇಳಿ ಬಾಬಾ ದುಃಖದಿಂದ ಹೇಳಿದರು, ''ಅಯ್ಯೋ, ಈ ಇಳಿವಯಸ್ಸಿನಲ್ಲಿ ಅವನು ಬಹಳ ದುಃಖಗೊಂಡಿದ್ದಾನೆ. ೪೦ ವರ್ಷಗಳ ಹಿಂದೆ ಕ್ಷಾಮ ಬಂದಿದ್ದಾಗ, ಅವನನ್ನು ಭೇಟಿಯಾಗಿದ್ದೆ. ಅವನು ಈಗಲೂ ಪತ್ರ ಬರೆಯುತ್ತಾನೆ. ಎಷ್ಟು ಶುದ್ಧವಾದ ಬಂಗಾಳೀ ಭಾಷೆ – 'ನಿಮ್ಮ ಸ್ನೇಹಭರಿತ ಪತ್ರ ಸಿಕ್ಕರೆ ಸಂತೋಷವಾಗುವುದು' ಅಂತ ಬರೆದಿದ್ದಾನೆ. ಹಿಂದೊಮ್ಮೆ ಆತ ಬರೆದಿದ್ದ, 'ನಿಮ್ಮನ್ನೇ ನೆನೆಯುತ್ತಿರುತ್ತೇನೆ. ಆಗ ಮನಸ್ಸಿಗೆ ಬಲ ಬರುತ್ತದೆ, ಸೇವಾಶಕ್ತಿಯ ಸಂಚಾರವಾಗುತ್ತದೆ' ಅಂತ. ಅವನು ತಾನಾಗಿ ಇಲ್ಲಿಗೆ ಬರಲು ಇಷ್ಟಪಡುವುದಿಲ್ಲ , ನನ್ನನ್ನೂ ಅಲ್ಲಿಗೆ ಕರೆಯುವುದಿಲ್ಲ. ಏನೆನ್ನುತ್ತಾನೆ ಗೊತ್ತೆ? 'ಅದೇ ತರುಣ ಸನ್ಯಾಸಿಯ ರೂಪ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ಅದೇ ತುಂಬ ಚೆನ್ನಾಗಿದೆ' ಎನ್ನುತ್ತಾನೆ. ಗಂಗೆಯ ಪಶ್ಚಿಮಭಾಗದ ಮಣ್ಣು; ಭತ್ತದ ಬೆಳೆ ಫಲವತ್ತಾಗಿದೆ. ಒಮ್ಮೆ ಎಲ್ಲರೂ ಅಲ್ಲಿಗೆ ಹೋಗಿಬನ್ನಿ. ಅವನು ದುಃಖದಿಂದಿದ್ದಾನೆ. ನೀವು ಅಲ್ಲಿಗೆ ಹೋದರೆ ಅವನಿಗೆ ಆನಂದವಾಗುತ್ತದೆ. ಹೋಗುವಾಗ ಜೊತೆಯಲ್ಲಿ ಮ್ಯಾಜಿಕ್ ಲಾಟೀನು, ಸ್ಲೈಡುಗಳನ್ನು ತೆಗೆದುಕೊಂಡು ಹೋಗಿ. ಪ್ರಚಾರ ಕಾರ್ಯವೂ ನಡೆಯುವುದು.''

* * *

ಒಂದು ದಿನ ಬಾಬಾ ಹಿಂದಿನ ಘಟನೆಯನ್ನು ಕುರಿತು ಹೇಳಿದರು: ''ದೆಹಲಿಯಲ್ಲಿ ಒಂದು ದಿನ ಸಾಯಂಕಾಲ ಪಾರ್ಕಿನ ಬೆಂಚಿನಲ್ಲಿ ಕುಳಿತಿದ್ದೆ. ಠಾಕೂರರ ಭಕ್ತರ ಮನೆಯಲ್ಲಲ್ಲದೆ ಬೇರೆ ಯಾರ ಮನೆಯಲ್ಲೂ ನಾನು ರಾತ್ರಿ ತಂಗುತ್ತಿರಲಿಲ್ಲ. ಇಬ್ಬರು ಮಾರ್ವಾಡಿಗಳು ಬಂಗಾಳಿ ಸಾಧುವನ್ನು (ನನ್ನನ್ನು) ನೋಡಿ ಪಕ್ಕದಲ್ಲಿ ಬಂದು ಕುಳಿತರು. ಸ್ವಲ್ಪಹೊತ್ತು ಮಾತುಕತೆಯ ಬಳಿಕ ನನಗೆ ಹಣಕೊಡಲು ಮುಂದಾದರು. ನಾನು 'ಬೇಡ' ಎಂದೆ. ಆಗ ಅವನು ಹೇಳಿದ, 'ದಕ್ಷಿಣೇಶ್ವರದಲ್ಲಿ ಒಮ್ಮೆ ರಾಮಕೃಷ್ಣ ಪರಮಹಂಸರಿಗೆ ಹಣ ಕೊಡಲು ಹೋಗಿದ್ದ, ಅವರು ಕೂಗಾಡಿದರು.' ಆಗ ನನಗೆ ತಿಳಿಯಿತು, ಆತನೇ ಲಕ್ಷ್ಮೀನಾರಾಯಣ ಮಾರ್ವಾಡಿ ಅಂತ.''

ಒಂದು ದಿನ ಸಂಜೆ ಹಾಲ್‌ನಲ್ಲಿ ಒಬ್ಬ ವಯಸ್ಸಾದ ಸಾಧುಗಳು ಬಾಬಾ ಕಣ್ಣಿಗೆ ಕಂಪ್ರೆಸ್ ಕೊಡುತ್ತಿದ್ದಾರೆ. ಸ್ವಲ್ಪ ಹೊತ್ತಾದ ಮೇಲೆ ಬಾಬಾ ಹೇಳಿದರು: ''ಯಾವ ಕಡೆ ಕೊಡುತ್ತಿರುವೆ? ನನಗೆ ನೋವಿರುವುದು ಎಡಗಡೆಗೊ? ಬಲಗಡೆಗೊ?'' ಸಾಧುಗಳು ಜೋರಾಗಿ ನುಡಿದರು: ''ನೀವು ತಪ್ಪು ತಿಳಿದಿದ್ದೀರಿ. ನಿಮಗೆ ನೋವು ಎಡಗಡೆ.'' ಬಾಬಾ ಕಠಿಣವಾಗಿ ನುಡಿದರು: ''ನಾನು ತಪ್ಪು ಹೇಳಿಲ್ಲ. ನಮ್ಮಿಂದ ಆ ರೀತಿ ತಪ್ಪಾಗುವುದಿಲ್ಲ.'' ಆಗ ಸಾಧುಗಳು ತುಸು ಮೆತ್ತಗಾಗಿ, ''ನಾವು ಕಲಿಯಲು ಬಂದಿದ್ದೇವೆ. ಆಶೀರ್ವಾದ ಮಾಡಿ.'' ಎಂದರು. ಬಾಬಾ ಇನ್ನೂ ಮೃದುವಾಗಿ, ''ಹಾಗೆ ಹೇಳಿ. ಖಂಡಿತ ನಿನಗೆ ಆಶೀರ್ವಾದ ಮಾಡುತ್ತೇನೆ. ಹೀಗೆ ಆಶೀರ್ವಾದ ಮಾಡುತ್ತಲೇ ಇರಬಲ್ಲೆ'' ಎಂದರು.

* * *

ಆಶ್ರಮದಲ್ಲೊಬ್ಬ ವಿದ್ಯಾರ್ಥಿ ವಾಸ ಮಾಡುತ್ತಿದ್ದ. ಅವನು ದೀಕ್ಷಿತ ಬ್ರಾಹ್ಮಣ; ಹೇಗೂ ದೀಕ್ಷೆಯಾಗಿದೆ, ಇನ್ನು ಸಂಧ್ಯಾವಂದನೆ, ಗಾಯತ್ರಿ, ಜನಿವಾರ ಇವುಗಳ ಅಗತ್ಯವೇನೂ ಇಲ್ಲವೆಂದು ಅವನ ಮನೋಭಾವ. ಈ ವಿಷಯ ಬಾಬಾ ಕಿವಿಗೆ ಬೀಳುತ್ತಲೇ ಅವರು ಕೋಪಗೊಂಡು, '' ನನಗಿದು ತಿಳಿದಿರಲಿಲ್ಲವಲ್ಲ, ಅವನು ಜನಿವಾರವನ್ನೂ ಎಸೆದುಬಿಟ್ಟಿದ್ದಾನೆ. ಇದೇನು! ಬ್ರಾಹ್ಮಣರ ಮಗ. ಠಾಕೂರರು ಮನ್ಮಥನಿಗೆ ಜನಿವಾರ ಹಾಕಿಸಿದ್ದರು. ಸ್ವಾಮೀಜಿ ಕೂಡ ಎಷ್ಟೋ ಮಂದಿಗೆ ಜನಿವಾರ ಹಾಕಿಸಿ ಹೋಗಿದ್ದಾರೆ. ಇಲ್ಲಿ ಇದೇನು ಅವಸ್ಥೆ! ಈಗಲೇ ಹೇಳುತ್ತಿದ್ದೇನೆ, ಇದಾಗದು.''

*(ಮುಂದುವರಿಯುವುದು)*



# ಕೈಲಾಸ -ಮಾನಸ ಸರೋವರ ಯಾತ್ರೆ

ಸ್ವಾಮಿ ದಾಮೋದರಾನಂದ

*ಅನುವಾದ: ಡಾ.ಕೆ.ಎಲ್.ಪ್ರಸನ್ನಾಕ್ಷಿ*

ಭಾಗ ೨

**ಟಿಬೆಟ್ ಪ್ರಸ್ಥಭೂಮಿ ಮತ್ತು ಮಂಡಿ :** ಲ್ಹಾಸಾದಲ್ಲಿದ್ದುಕೊಂಡು ದಲೈ ಲಾಮಾ ಅವರು ಟಿಬೆಟ್ ದೇಶವನ್ನು ಆಳುತ್ತಿದ್ದರು. ಎರಡೂ ದೇಶಗಳೊಡನೆ ಪ್ರಾಚೀನ ಸಾಂಸ್ಕೃತಿಕ ಸಂಬಂಧವಿತ್ತು. ಭಾರತದ ಹಿಂದೂ ಯಾತ್ರಿಕರು ಪ್ರತಿವರ್ಷ ಕೈಲಾಸ ಪರ್ವತಕ್ಕೆ ಯಾತ್ರೆ ಹೋಗುತ್ತಿದ್ದುದರಿಂದ ಅದು ಟಿಬೆಟ್ಟಿನ ಮೇಲೆ ಸ್ವಲ್ಪ ಮಾತ್ರ ನಿಯಂತ್ರಣ ಹೊಂದಿತ್ತು.

ಟಿಬೆಟ್ ಪ್ರಸ್ಥಭೂಮಿ ವಿಶ್ವದಲ್ಲೇ ಅತಿ ಎತ್ತರವಾಗಿದ್ದು, ಅದು ವಿಸ್ತಾರವಾದ ಭೂಭಾಗವನ್ನು ಆಕ್ರಮಿಸಿದೆ. ಸಮುದ್ರ ಮಟ್ಟಕ್ಕಿಂತ ೧೦,೦೦೦ ಅಡಿ ಎತ್ತರದಲ್ಲಿ ಈ ಭೂಭಾಗವಿದೆ. ಹಿಮಾಲಯ ಪರ್ವತದ ತಪ್ಪಲು ಭೂಮಿಯಿಂದ ಟಿಬೆಟ್ ದೇಶದ ಜನರಿಗೆ ಅಗತ್ಯ ಪದಾರ್ಥಗಳನ್ನು ತಂದು, ಅವರೊಡನೆ ವ್ಯಾಪಾರ ಮಾಡುತ್ತಿದ್ದ ಆ ಕುರುಬ ಮಿತ್ರರೊಡನೆಯೇ ನಾನು ಯಾತ್ರೆ ಮುಂದುವರೆಸಿದೆ.

ಟಿಬೆಟ್ ದೇಶದ ಸರಹದ್ದು ದಾಟಿ ನಾವು ಬೇಸಿಗೆ ಮಾರುಕಟ್ಟೆಯಾದ 'ಮಂಡಿ'ಯನ್ನು ತಲುಪಿದೆವು. ಅಲ್ಲಿ ಉಣ್ಣೆಗೆ ಬದಲಾಗಿ ಭಾರತೀಯ ಸಾಮಗ್ರಿಗಳನ್ನು ಮಾರಲಾಗುತ್ತಿತ್ತು. 'ವಿನಿಮಯ ಪದ್ಧತಿ'ಗನುಗುಣವಾಗಿ ಎಲ್ಲಾ ವ್ಯವಹಾರಗಳೂ ನಡೆಯುತ್ತಿದ್ದವು. ಭಾರತೀಯ ಪದಾರ್ಥಗಳಿಗೆ ವಿನಿಮಯ ಮಾಡಿಕೊಳ್ಳಲು ಇದ್ದ ಟಿಬೆಟ್ಟಿನ ಐಶ್ವರ್ಯವೆಂದರೆ ಉಣ್ಣೆಯೊಂದೇ. ಆ ಬೇಸಿಗೆಯ ಮಾರುಕಟ್ಟೆಯಲ್ಲಿ ಅನೇಕ ಬಿಡಾರಗಳಿದ್ದವು. ಅದೃಷ್ಟವಶಾತ್ ಸೂರ್ಯ ಪ್ರಕರ್ಷಮಾನನಾಗಿದ್ದ, ಮಳೆ ಇರಲಿಲ್ಲ. ಇಂತಹ ಹಿತಕರ ವಾತಾವರಣದಲ್ಲಿ ಟಿಬೆಟ್ಟಿನ ವಿವಿಧ ಸ್ಥಳಗಳಿಂದ ವ್ಯಾಪಾರಕ್ಕಾಗಿ ಜನರು ಬಂದಿದ್ದರು. ಇದು ವರ್ಷದಲ್ಲಿ ಒಮ್ಮೆ ಮಾತ್ರ ನಡೆಯುತ್ತಿದ್ದ ವ್ಯಾಪಾರ ಮೇಳ.

ಟಿಬೆಟಿಯನ್ನರೊಡನೆ ವ್ಯಾಪರ ವಹಿವಾಟು ನಡೆಯುತ್ತಿದ್ದ ಒಂದು ಬಿಡಾರದಲ್ಲೇ ನಾನು ವಾಸವಾಗಿದ್ದೆ. ಅಲ್ಲಿ ಒಬ್ಬ ಯುವಕ ಭಾರತದ ಸಾಮಗ್ರಿಗಳನ್ನು ವಿನಿಮಯ ಮಾಡಿಕೊಳ್ಳಲು ಬಂದಿದ್ದ. ಆತನ ಕಣ್ಣುಗಳು ಕೆಂಪಾಗಿದ್ದುದನ್ನು ನಾನು ಗಮನಿಸಿದೆ. ಅವನ ಕಣ್ಣುಗಳಿಗೆ ಸಾಂಕ್ರಾಮಿಕ ರೋಗ ಬಂದಿದೆ ಎಂದು ತಿಳಿದೆ. ವೃಂದಾವನದ ಚಿಕಿತ್ಸಾಲಯದಲ್ಲಿ ಕಣ್ಣಿನ ವಿಭಾಗದಲ್ಲಿ ಕೆಲಸ ಮಾಡುತ್ತ ಇದ್ದುದರಿಂದ ಪ್ರಥಮಚಿಕಿತ್ಸೆಯ ಪೆಟ್ಟಿಗೆಯನ್ನು ತುರ್ತು ಸಂದರ್ಭಕ್ಕಿರಲಿ ಎಂದು ನಾನು ಒಯ್ದಿದ್ದೆ. ಚಿಕಿತ್ಸಾಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದುದರಿಂದ ಔಷಧಗಳ ಉಪಯೋಗ, ಚಿಕಿತ್ಸಾಕ್ರಮಗಳನ್ನು ಚೆನ್ನಾಗಿ ತಿಳಿದಿದ್ದೆ. ನನ್ನ ಔಷಧದ ಪೆಟ್ಟಿಗೆಯಲ್ಲಿ ರೋಗನಿರೋಧಕ ಗುಳಿಗೆಗಳು, sulphanilamide powder, ಕಣ್ಣಿನ ರೋಗ ನಿವಾರಕ ಔಷಧಿ ಮುಂತಾದವುಗಳು ಇದ್ದವು. ಆ ಯುವಕನಿಗೆ ಚಿಕಿತ್ಸೆ ನೀಡಬೇಕೆಂದು ನನಗನ್ನಿಸಿತು. ಈ ವಿಚಾರವನ್ನು ತಿಳಿದಿದ್ದ ನನ್ನೊಂದಿಗಿದ್ದ, ಟಿಬೆಟ್ ಭಾಷೆ ಬಲ್ಲ ವ್ಯಾಪಾರಿಗೆ ತಿಳಿಸಿದೆ. ಅವನ ಕಣ್ಣುಗಳಿಗೆ ಸಾಂಕ್ರಾಮಿಕ ರೋಗ ಬಂದಿದೆ, ನನ್ನ ಬಳಿ ಅದಕ್ಕೆ ಔಷಧವಿದೆ, ನಾನು ಅದನ್ನು ಅವನಿಗೆ ಕೊಡಬೇಕೆಂದಿದ್ದೇನೆ, ಹಾಗೂ ಅದನ್ನು ದಿನಕ್ಕೆ ಮೂರು ಬಾರಿ ಅವನ ಕಣ್ಣುಗಳಿಗೆ ಹಚ್ಚಬೇಕೆಂದೂ ತಿಳಿಸಿದೆ. ಆ ಯುವಕ ನನ್ನ ಕಡೆಗೆ ನೋಡಿದ. ಆ ವ್ಯಾಪಾರಿಯ ಮೂಲಕ ಬಿಡಾರಕ್ಕೆ ಹೋಗಿ ಹಿಂತಿರುಗಿ ಬರುವುದಾಗಿ ನನಗೆ ತಿಳಿಸಿದ. ಅವನು ಒಂದು ಚರ್ಮದ ಸಣ್ಣ ಗಂಟನ್ನು ಕೈಯಲ್ಲಿ ಹಿಡಿದುಕೊಂಡು ಸ್ವಲ್ಪ ಸಮಯದಲ್ಲೇ ಹಿಂತಿರುಗಿ ಬಂದ. ನನ್ನ ಔಷಧಿಗಳಿಗೆ ಪ್ರತಿಯಾಗಿ ಆ ಗಂಟನ್ನು ನನಗೆ ಕೊಟ್ಟ. ಸಾಧುಗಳು ಉಚಿತವಾಗಿ ಕೊಟ್ಟಿದ್ದನ್ನು ಟಿಬೆಟ್ಟನ್ನರು ತೆಗೆದುಕೊಳ್ಳಬಯಸುವುದಿಲ್ಲ. ಅದಕ್ಕೆ ಪ್ರತಿಯಾಗಿ ಅವರು ಏನನ್ನಾದರೂ ಕೊಡಲಿಚ್ಛಿಸುತ್ತಾರೆ. ಆ ಚರ್ಮದ ಗಂಟಿನಲ್ಲಿ ಒಂದು ಫುಟ್‌ಬಾಲ್ ಚೆಂಡಿನಂಥ ಪದಾರ್ಥವನ್ನು ಯುವಕ ತಂದಿದ್ದ. ಅದು ಕುರಿಯದೋ, ಯಾಕ್‌ದೋ, ಮೇಕೆಯದೋ ಬೆಣ್ಣೆಯಾಗಿತ್ತು. ಚರ್ಮದ ಚೀಲದಲ್ಲಿ ಗಂಟು ಕಟ್ಟಿದ್ದರಿಂದ ಬೆಣ್ಣೆ

ಕರಗುವಂತಿರಲಿಲ್ಲ. ನಾನು ಆ ಗಂಟನ್ನು ಯುವಕನಿಂದ ಪಡೆದೆ; ಯುವಕ ನನ್ನಿಂದ ಔಷಧಿ ತೆಗೆದುಕೊಂಡು, ನನಗೆ 'ನಮಸ್ತೆ' ಎಂದು ಹೇಳಿ ಹೊರಟುಹೋದ. ಟಿಬೆಟ್ ಬೌದ್ಧರ ನಾಡಾದ್ದರಿಂದ ಸಾಧು ಸಂನ್ಯಾಸಿಗಳಿಗೆ ಅಲ್ಲಿ ವಿಶೇಷ ಗೌರವ. ಅವರ ಮತಧರ್ಮದಂತೆ ಸೇವಾಮನೋಭಾವ, ದಾನಸ್ವಭಾವವುಳ್ಳವರು ಅವರು.

ಸಹಜವಾಗಿ ಬೌದ್ಧರು ಉದಾರಿಗಳು ಮತ್ತು ದಾನಿಗಳು. ಯುವಕನ ಈ ನಡತೆ ಅದಕ್ಕೆ ಸಾಕ್ಷಿಯಂತೆ ಇತ್ತು. ಬರ್ಮಾದೇಶದ ಪುರಾತನ ರಾಜಧಾನಿ ಮಂಡಾಲೆಗೆ ಹೋಗುವಾಗ ಆದ ಒಂದು ಅನುಭವ ಇಲ್ಲಿ ನೆನಪಾಗುತ್ತಿದೆ. ಇರಾವತೀ ನದಿಯಲ್ಲಿ ದೋಣಿಯ ಮೇಲೆ ಪ್ರಯಾಣ ಮಾಡುತ್ತಿದ್ದೆ. ಅದು ಊಟದ ಸಮಯವಾಗಿತ್ತು. ನನ್ನೊಡನೆ ಪ್ರಯಾಣ ಮಾಡುತ್ತಿದ್ದ ಒಬ್ಬಾಕೆ ತಾಯಿ ನನ್ನ ಬಳಿಗೆ ಬಂದು ಪ್ರಣಾಮ ಮಾಡಿದಳು. ನನಗೆ ಬರ್ಮೀ ಭಾಷೆ ಗೊತ್ತಿರಲಿಲ್ಲ; ಆದ್ದರಿಂದ ಊಟ ಮಾಡುವಂತೆ ಆಕೆ ನನಗೆ ಸನ್ನೆಮಾಡಿ ಸೂಚಿಸಿದಳು. ನನ್ನ ಹೊಟ್ಟೆ ತುಂಬಿದ್ದರಿಂದ ನನಗೆ ತಿನ್ನುವ ಅಪೇಕ್ಷೆಯೇ ಇರಲಿಲ್ಲ. ಆಕೆಗೆ ನನ್ನ ಕೃತಜ್ಞತೆಗಳನ್ನು ಸೂಚಿಸುತ್ತಾ ನಾನೂ ಈ ವಿಚಾರವನ್ನು ಸನ್ನೆಯಿಂದಲೇ ತಿಳಿಸಿ, ನಮಸ್ಕರಿಸಿದೆ. ಬೌದ್ಧಮತಾವಲಂಬಿಗಳು ಸಾಧು-ಸಂನ್ಯಾಸಿಗಳು ಯಾವುದೇ ಮತಾವಲಂಬಿಗಳಾಗಿರಲಿ, ಯಾವುದೇ ವಯಸ್ಸಿನವರಿರಲಿ ಅವರಿಗೆ ಆದರಾತಿಥ್ಯ ನೀಡುತ್ತಾರೆ.

ಮಂಗ್‌ಲಾಂಗ್ ಎಂಬಲ್ಲಿ ಪವಿತ್ರ ಕ್ಷೇತ್ರವಿದೆಯೆಂದು ಕೆಲವು ಟಿಬೆಟಿಯನ್ನರು ಹೇಳಿದರು. ಟಿಬೆಟ್ ಪ್ರಸ್ಥಭೂಮಿಯ ಪಶ್ಚಿಮ ತುದಿಯಲ್ಲಿರುವ ಬೌದ್ಧ ಯಾತ್ರಾಕೇಂದ್ರವದು. ಟಿಬೆಟ್‌ನ ಪೂರ್ವಭಾಗದಲ್ಲಿ ಮಾನಸಸರೋವರ, ಕೈಲಾಸ ಪರ್ವತಗಳಿದೆಯೆಂದು ಕೇಳಿ ತಿಳಿದಿದ್ದೆ. ಮಂಗ್‌ಲಾಂಗ್ ತಲುಪುವ ಮಾರ್ಗವನ್ನು ಕುರಿತು ಪೂರ್ಣ ಮಾಹಿತಿ ಪಡೆದು, ನಾನು ಟಿಬೆಟ್‌ನ ಪಶ್ಚಿಮದತ್ತ ನನ್ನ ಪ್ರಯಾಣ ಮುಂದುವರೆಸಿದೆ. ಅದು ನಡೆದು ನಡೆದು ಸವೆದ ದಾರಿಯಾದ್ದರಿಂದ ದಾರಿ ಹುಡುಕಲು ಕಷ್ಟವಾಗಲಿಲ್ಲ. ಆದರೆ ಬಹಳ ಸಮಯ ನಡೆಯಬೇಕಾಯಿತು. ನಾನು ಸಾಗುತ್ತಿದ್ದ ದಾರಿಯಲ್ಲಿ ಕುದುರೆ, ಮೇಕೆ, ಯಾಕ್ ಮೊದಲಾದ ಪ್ರಾಣಿಗಳನ್ನು ಹೊರತುಪಡಿಸಿ ಮನುಷ್ಯರಾರೂ ಕಂಡುಬರಲಿಲ್ಲ. ಅದು ಸಂಪೂರ್ಣ ನಿರ್ಜನ ಪ್ರದೇಶವಾಗಿತ್ತು.

ಮಂಗ್‌ಲಾಂಗ್‌ನ ಬುದ್ಧ ದೇವಾಲಯವನ್ನು ನಾನು ತಲುಪಿದಾಗ ಸಂಜೆ ೭ ಘಂಟೆಯಾಗಿತ್ತು. ದೇವಾಲಯವನ್ನು ನಾನು ಪ್ರವೇಶಿಸುತ್ತಿದ್ದಂತೆ ಅಲ್ಲಿದ್ದ ಸಂನ್ಯಾಸಿ ಭಿಕ್ಷುಗಳು ನನ್ನನ್ನು ಸ್ವಾಗತಿಸಿ ಕುರಿಯ ಹಾಲು, ಚೀಸ್ ಮತ್ತು ಉಪ್ಪು ಚಹಾಗಳನ್ನು ನನಗೆ ಕೊಟ್ಟರು. ಅವರು ಚೀಸ್ ತಯಾರು ಮಾಡುವ ಕ್ರಮ ತುಂಬಾ ಸರಳವಾದುದು. ಮೇಕೆ ಅಥವಾ ಕುರಿಯ ಹಾಲನ್ನು ಸೂರ್ಯನ ಸುಡು ಬಿಸಿಲಿನಲ್ಲಿಟ್ಟಾಗ ಹಾಲೊಡೆದು, ನೀರು ಮತ್ತು ಗಟ್ಟಿ ಭಾಗ ಬೇರೆ ಬೇರೆಯಾಗುತ್ತವೆ. ಸೂರ್ಯನ ತಾಪಕ್ಕೆ ನೀರಿನ ಅಂಶವೆಲ್ಲ ಇಂಗಿ ಹೋಗಿ, ಗಟ್ಟಿ ಕೆನೆಭಾಗ ಮಾತ್ರ ಉಳಿಯುತ್ತದೆ. ಹೀಗೆ ಸಹಜವಾದ ರೀತಿಯಲ್ಲಿ ಅವರು ಚೀಸ್ ತಯಾರುಮಾಡುತ್ತಾರೆ. ನಾನು ಸಸ್ಯಾಹಾರಿಯಾಗಿದ್ದರಿಂದ, ದೇವಾಲಯ ಮತ್ತು ಬಿಡಾರಗಳಲ್ಲಿ ಸದಾ ಸಿದ್ಧವಾಗಿರುತ್ತಿದ್ದ ಚೀಸ್ ಮತ್ತು ಉಪ್ಪು ಚಹಾ ಕೊಟ್ಟರು. ಅದು ಶೀತಲ ನಾಡಾದುದರಿಂದ ಅವರು ಯಾರೂ ನೀರು ಕುಡಿಯುವುದಿಲ್ಲ. ಅದರ ಬದಲಿಗೆ ಉಪ್ಪು ಹಾಕಿದ ಚಹಾವನ್ನೇ ಕುಡಿಯುತ್ತಾರೆ.

ಹೊಟ್ಟೆ ತುಂಬಿ, ನಡೆದ ಆಯಾಸವೂ ಪರಿಹಾರವಾದ ಮೇಲೆ ನಾನು ದೇವಾಲಯದೊಳಕ್ಕೆ ಹೋದೆ. ಆಸನವೊಂದರಲ್ಲಿ ಕುಳಿತಿರುವ ೨೦ ಅಡಿ ಎತ್ತರದ ಬೃಹದಾಕಾರದ ಬುದ್ಧನ ವಿಗ್ರಹವನ್ನು ಕಂಡೆ. ಈ ಬುದ್ಧನ ವಿಗ್ರಹದ ಸುತ್ತಲೂ ಧ್ಯಾನಮುದ್ರೆಯಲ್ಲಿರುವ ಸಣ್ಣ ಸಣ್ಣ ಬುದ್ಧರನ್ನಿಟ್ಟು ಅಲಂಕರಿಸಿದ್ದರು. ಆ ದೊಡ್ಡ ದೇವಾಲಯದಲ್ಲಿ ಪ್ರತಿ ಸಣ್ಣ ಬುದ್ಧನ ವಿಗ್ರಹದ ನಡುನಡುವೆ ಬೇಕಾದಷ್ಟು ಟಿಬೆಟ್ ಗ್ರಂಥಗಳ ಹಸ್ತಪ್ರತಿಗಳಿದ್ದವು. ಅವೆಲ್ಲವೂ ಬೌದ್ಧಮತ ಪ್ರತಿಪಾದಕ ಗ್ರಂಥಗಳು ಎಂದು ಅವರು ತಿಳಿಸಿದರು. ಆ ಬೃಹದ್ದೇವಾಲಯದಲ್ಲಿ ಕುಳಿತು ನಾನು ನೆಮ್ಮದಿಯಿಂದ ಧ್ಯಾನ ಮಾಡಿದೆ.

ಮತ್ತೆ ಮರುದಿನ ನಾನು ಪೂರ್ವದಿಕ್ಕಿನ ಕಡೆಗೆ ಪ್ರಯಾಣ ಬೆಳೆಸಿದೆ. ಮತ್ತೊಮ್ಮೆ ನಾನು ಏಕಾಕಿ. ಕಾಲುದಾರಿಯಲ್ಲೇ ಸಾಗಬೇಕೆಂದೂ, ಬೇರೆ ಹಾದಿಗಳನ್ನು ಹಿಡಿಯಬಾರದೆಂದೂ ನನಗೆ ತಿಳಿಸಿದ್ದರು. ಸ್ವಲ್ಪ ದೂರ ಒಬ್ಬಂಟಿಯಾಗಿ ನಡೆದ ಮೇಲೆ, ಸಿಖ್ಖ್ ಮತಕ್ಕೆ ಸೇರಿದ, ಬಿಳಿಯ ವಸ್ತ್ರ ಧರಿಸಿದ್ದ ಒಬ್ಬ ಬ್ರಹ್ಮಚಾರಿಯನ್ನು ನಾನು ಭೇಟಿಯಾದೆ. ಆತನೂ ಕೈಲಾಸ ದರ್ಶನಕ್ಕಾಗಿ ಟಿಬೆಟ್ಟಿಗೆ ಬಂದಿದ್ದ. ನಾವಿಬ್ಬರೂ ಒಟ್ಟಿಗೆ ಪ್ರಯಾಣ ಮುಂದುವರೆಸಿದೆವು. ದಾರಿಯಲ್ಲಿ ಕುದುರೆ ಮೊದಲಾದ ಪ್ರಾಣಿಗಳಾಗಲೀ ವಿಶ್ರಾಂತಿಯ ಬಿಡಾರಗಳಾಗಲೀ ಇರಲಿಲ್ಲ. ಎಲ್ಲೆಲ್ಲೂ ಸಂಪೂರ್ಣ ನೀರವತೆ. ನಮ್ಮ ಬಳಿ ಇದ್ದ ಚೀಸ್ ಒಂದೇ ನಮಗೆ ಆಹಾರ.

**ಕೈಲಾಸ ಶಿಖರದೆಡೆಗೆ :** ಸೂರ್ಯಾಸ್ತವಾಗುವವರೆಗೆ ನಾವು ನಮ್ಮ ಪ್ರಯಾಣ ಮುಂದುವರೆಸಿದೆವು. ರಾತ್ರಿಯನ್ನು ಕಳೆಯಲು ನಮಗೆ ಯಾವ ಆಸರೆಯೂ ಕಾಣಲಿಲ್ಲ. ರಸ್ತೆ ಬದಿಯಲ್ಲೇ ನಾವು ರಾತ್ರಿ ಕಳೆಯಬೇಕಾಗಿತ್ತು. ನಮ್ಮಲ್ಲಿದ್ದ ಬೆಡ್‌ಶೀಟ್‌ಗಳನ್ನೇ ಹಾಸಿ, ಅಲ್ಲಿದ್ದ ಎರಡಡಿ ಎತ್ತರದ ಭಾರವಾದ ಕಲ್ಲುಗಳನ್ನು ಮೂರು ಬದಿಯಲ್ಲೂ ಜೋಡಿಸಿ, ಅದರ ಮೇಲೆ ಮತ್ತೆ ಇನ್ನೊಂದು ಶೀಟನ್ನು ಹಾಸಿ, ಮತ್ತೆ ಅದರ ಮೇಲೆ ಭಾರಕ್ಕೆ ಕಲ್ಲುಗಳನ್ನಿಟ್ಟು, ಇಬ್ಬರೂ ಪ್ರತ್ಯೇಕ ಬಿಡಾರ ಮಾಡಿಕೊಂಡೆವು. ಅಲ್ಲಿ ಹೇಗೋ ರಾತ್ರಿಯನ್ನು ಕಳೆಯುವುದೆಂದು ನಾವು ನಿಶ್ಚಯಿಸಿದೆವು. ಆದರೆ ವಿಪರೀತವಾದ ಚಳಿ, ಸುಂಯ್ ಗುಡುವ ಗಾಳಿಯ ಕಾರಣದಿಂದಾಗಿ ನಿದ್ರಿಸಲಾಗಲಿಲ್ಲ. ಅದೃಷ್ಟವಶಾತ್ ಕಾಡುನಾಯಿಗಳಾಗಲಿ, ತೋಳಗಳಾಗಲಿ ರಾತ್ರಿ ಹೊತ್ತು ನಮ್ಮ ಮೇಲೆ ಆಕ್ರಮಣ ಮಾಡಲಿಲ್ಲ. ಅಲ್ಲಿ ಕಾಡುನಾಯಿಗಳ ತಂಡ ಎಷ್ಟು ಕ್ರೂರವಾಗಿರುವುದೆಂದರೆ ಅವು ಮನುಷ್ಯರನ್ನೇ ಬೇಕಾದರೂ ತಿಂದು ಹಾಕಿಬಿಡುವುವು – ಎಂದು ನಮಗೆ ಯಾರೋ ಹೇಳಿದ್ದರು.